ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
("ವಿ ಟಿ ಯು ಅಧಿನಿಯಮ ೧೯೯೪" ರ ಅಡಿಯಲ್ಲಿ ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ ರಾಜ್ಯ ವಿಶ್ವವಿದ್ಯಾಲಯ)
Visvesvaraya Technological University
(State University of Government of Karnataka Established as per the VTU Act, 1994)
"Jnana Sangama" Belagavi-590018, Karnataka, India

ಡಾ. ಬಿ. ಈ. ರಂಗಸ್ವಾಮಿ
ಕುಲಸಚಿವರು

ದೂರವಾಣಿ: 0831-2498112
ಇ-ಮೇಲ್: registrar@vtu.ac.in

ಸಂ. ವಿತಾವಿ/ಬೆಳಗಾವಿ/ವಿಕಅ/2022-23/02

ದಿನಾಂಕ: 27 DEC 2022

## :ಸುತ್ತೋಲೆ:

ವಿಷಯ: 2022-23ನೇ ಸಾಲಿನ ಪದವಿ (ಯು.ಜಿ) ಹಾಗೂ ಸ್ನಾತಕೋತ್ತರ (ಪಿ.ಜಿ) ವಿದ್ಯಾರ್ಥಿಗಳಿಗೆ **"ಸಹಕಾರ ವಿಷಯ"** ಕುರಿತ ಚರ್ಚಾ ಸ್ಪರ್ಧೆಯನ್ನು ಏರ್ಪಡಿಸುವ ಕುರಿತು.

ಉಲ್ಲೇಖ: ನಂ: ಸಶಿವಿ/12/2022-23/ ದಿನಾಂಕ: 12.11.2022.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ, ಬೆಂಗಳೂರು ಇವರು 2022-23ನೇ ಸಾಲಿನ ಅಂತರ ವಿಶ್ವವಿದ್ಯಾಲಯ ಪದವಿ (ಯು.ಜಿ) ಹಾಗೂ ಸ್ನಾತಕೋತ್ತರ (ಪಿ.ಜಿ) ವಿದ್ಯಾರ್ಥಿಗಳಿಗೆ **"ಸಹಕಾರ ವಿಷಯ"** ಕುರಿತು ಚರ್ಚಾ ಸ್ಪರ್ಧೆಯನ್ನು ಏರ್ಪಡಿಸಲು ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಸಹಕಾರ ಕ್ಷೇತ್ರದಲ್ಲಿ ಭವಿಷ್ಯದ ಯುವಜನರಿಗೆ ಸಕ್ರೀಯವಾಗಿ ಭಾಗವಹಿಸಿ ಸಹಕಾರ ಚಳುವಳಿಯನ್ನು ಯಶಸ್ವಿಗೊಳಿಸಲು ಸಾಧ್ಯವಾಗುವಂತೆ ಮುಂದಾಳತ್ವ, ನಾಯಕತ್ವ ವಹಿಸುವುದಕ್ಕೆ ಪ್ರೇರೇಪಿಸುವ ಉದ್ದೇಶದಿಂದ ವಿದ್ಯಾರ್ಥಿಗಳಿಗೆ ಸಹಕಾರ ಕುರಿತು ಚರ್ಚಾ ಸ್ಪರ್ಧೆಯನ್ನು ವಿಶ್ವವಿದ್ಯಾಲಯ ಮಟ್ಟದಲ್ಲಿ ಏರ್ಪಡಿಸಬೇಕಾಗಿರುತ್ತದೆ.

ಆದ್ದರಿಂದ, ಚರ್ಚಾ ಸ್ಪರ್ಧೆಯ ವಿಷಯ ಆಯ್ಕೆಯನ್ನು ವಿದ್ಯಾರ್ಥಿಗಳ ವಿವೇಚನೆಗೆ ಬಿಡಲಾಗಿದೆ. ವಿಷಯದ ಆಯ್ಕೆಗೆ ಅನುಕೂಲವಾಗುವಂತೆ ಕೆಲವು ಮಾದರಿ ವಿಷಯಗಳನ್ನು ನೀಡಲಾಗಿದೆ.

೧. ವಿಶ್ವದ ಆರ್ಥವ್ಯವಸ್ಥೆ ಸುಭದ್ರಗೊಳ್ಳಲು ಸಹಕಾರಿ ವ್ಯವಸ್ಥೆಯನ್ನು ಬಲಪಡಿಸುವುದೊಂದೇ ಮಾರ್ಗ.

೨. ಭಾರತದ ಆರ್ಥಿಕ, ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕೆ ಸಹಕಾರಿ ಚಳವಳಿಯನ್ನು ಬಲಗೊಳಿಸುವುದೊಂದೇ ದಾರಿ.

೩. ಶಾಲಾ ಕಾಲೇಜು ಪಠ್ಯದಲ್ಲಿ ಸಹಕಾರ ವಿಷಯ ಸೇರಿಸುವುದು, ಸಹಕಾರಿ ವಿಶ್ವವಿದ್ಯಾಲಯ ಸ್ಥಾಪನೆ ಮಾಡುವುದರಿಂದ ಮಾತ್ರವೇ ರಾಷ್ಟ್ರದ ಸಹಲಾರಿ ಚಳವಳಿ ಬೆಳೆಯಬಲ್ಲದು.

೪. ಭಾರತದಲ್ಲಿ ಬಡತನ ನಿವಾರಣೆ, ಉದ್ಯೋಗಸೃಷ್ಠಿ, ಗ್ರಾಮೀಣ ಅಭಿವೃದ್ಧಿಯ ಗುರಿ ಮುಟ್ಟಲು ಸಹಕಾರಿ ವ್ಯವಸ್ಥೆಯನ್ನುಳಿದು ಪರ್ಯಾರ ವ್ಯವಸ್ಥೆ ಇಲ್ಲ.

ಸದರಿ ಚರ್ಚಾ ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು (ಒಬ್ಬರು ವಿಷಯದ ಪರವಾಗಿ ಮತ್ತೊಬ್ಬರು ವಿಷಯದ ವಿರುದ್ಧವಾಗಿ ಮಂಡನೆ ಮಾಡುವ ಹೆಸರನ್ನು ಸ್ಪಷ್ಟವಾಗಿ ನಮೂದಿಸಿ) ತಮ್ಮ ಕಾಲೇಜಿನ ಪ್ರಾಂಶುಪಾಲರು/ವಿದ್ಯಾರ್ಥಿ ಕಲ್ಯಾಣ ಅಧಿಕಾರಿಗಳ ಮುಖಾಂತರ ಈ ಸುತ್ತೋಲೆ ಜೊತೆಗೆ ಲಗತ್ತಿಸಿದ ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ವಿದ್ಯಾರ್ಥಿ ಕಲ್ಯಾಣ ಅಧಿಕಾರಿಗಳು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ (ಇ-ಮೇಲ್ ವಿಳಾಸ swo@vtu.ac.in) ಇವರಿಗೆ ದಿನಾಂಕ: 04-01-2023 ರೊಳಗಾಗಿ (Hard & Soft copy) ಕಳುಹಿಸಿಕೊಡಲು ಈ ಮೂಲಕ ಕೋರುತ್ತೇನೆ.

ಮುಂದುವರೆದು, ಈ ರೀತಿ ಏರ್ಪಡಿಸಿದ ವಿಶ್ವವಿದ್ಯಾಲಯ ಮಟ್ಟದ ಚರ್ಚಾ ಸ್ಪರ್ಧೆಯಲ್ಲಿ ಜಯಶೀಲರಾಗುವ ಮೊದಲ ಇಬ್ಬರು ಪದವಿ ವಿದ್ಯಾರ್ಥಿಗಳನ್ನು ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳನ್ನು ಸಹಕಾರ ಮಹಾಮಂಡಳವು ರಾಜ್ಯಮಟ್ಟದಲ್ಲಿ ಏರ್ಪಡಿಸುವ ಅಂತರ ಕಾಲೇಜು ಮಟ್ಟದ ಮತ್ತು ವಿಶ್ವವಿದ್ಯಾಲಯ ಮಟ್ಟದ ಚರ್ಚಾಸ್ಪರ್ಧೆಯಲ್ಲಿ ಭಾಗವಹಿಸಲು ವಿದ್ಯಾರ್ಥಿಗಳ ಹೆಸರನ್ನು ಕಳುಹಿಸಿಕೊಡಲಾಗುವುದು.

ಮೇಲ್ಕಂಡ ಚರ್ಚಾ ಸ್ಪರ್ಧೆಯಲ್ಲಿ ವಿಜೇತರಾಗುವ **"ಪದವಿ"** ವಿದ್ಯಾರ್ಥಿಗಳಿಗೆ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದಿಂದ ಈ ಕೆಳಕಂಡಂತೆ ನಗದು ರೂಪದಲ್ಲಿ ಮೂರು ಬಹುಮಾನವನ್ನು ನೀಡಲಾಗುವುದು.

| | |
|---|---|
| ೧. ಪ್ರಥಮ ಬಹುಮಾನ | ರೂ. 4,000 |
| ೨. ದ್ವಿತೀಯ ಬಹುಮಾನ | ರೂ. 3,000 |
| ೩. ತೃತೀಯ ಬಹುಮಾನ | ರೂ. 2,000 |

ವಿಜೇತರಾದ ವಿಶ್ವವಿದ್ಯಾಲಯಕ್ಕೆ ಒಂದು ಬೆಳ್ಳಿ ಪರ್ಯಾಯ ಪಾರಿತೋಷಕವನ್ನು ನೀಡಲಾಗುವುದು.

ಹಾಗೇಯೇ ರಾಜ್ಯಮಟ್ಟದಲ್ಲಿ **"ಸ್ನಾತಕೋತ್ತರ ಪದವಿ"** ವಿದ್ಯಾರ್ಥಿಗಳ ಚರ್ಚಾ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಈ ಕೆಳಕಂಡಂತೆ ನಗದು ರೂಪದಲ್ಲಿ ಮೂರು ಬಹುಮಾನವನ್ನು ನೀಡಲಾಗುವುದು.

| | |
|---|---|
| ೧. ಪ್ರಥಮ ಬಹುಮಾನ | ರೂ. 5,000 |
| ೨. ದ್ವಿತೀಯ ಬಹುಮಾನ | ರೂ. 4,000 |
| ೩. ತೃತೀಯ ಬಹುಮಾನ | ರೂ. 3,000 |

ವಿಜೇತರಾದ ವಿಶ್ವವಿದ್ಯಾಲಯಕ್ಕೆ ಒಂದು ಬೆಳ್ಳಿ ಪರ್ಯಾಯ ಪಾರಿತೋಷಕವನ್ನು ನೀಡಲಾಗುವುದು.

ಈ ಮೇಲ್ಕಂಡ ಸದರಿ ವಿಷಯವನ್ನು ಪದವಿ ಮತ್ತು ಸ್ನಾತಕೋತ್ತರ ಪದವಿಯ ವಿದ್ಯಾರ್ಥಿಗಳಿಗೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರಲು ಈ ಮೂಲಕ ಕೋರಲಾಗಿದೆ.

Raj B.E

**ಕುಲಸಚಿವರು**

ಇವರಿಗೆ,

1. ಪ್ರಾಂಶುಪಾಲರು, (ಘಟಕ/ಸ್ವಾಯತ್ತ/ಸಂಯೋಜಿತ), ಕಾಲೇಜುಗಳು, ವಿ.ತಾ.ವಿ., ಬೆಂಗಳೂರು, ಬೆಳಗಾವಿ, ಕಲಬುರಗಿ ಮತ್ತು ಮೈಸೂರು ವಿಭಾಗ.
2. ಸ್ನಾತಕೋತ್ತರ ಎಲ್ಲ ವಿಭಾಗಗಳ ಅಧ್ಯಕ್ಷರುಗಳು/ಸಂಯೋಜಕರು ವಿ.ತಾ.ವಿ., ಸ್ನಾತಕೋತ್ತರ ವಿಭಾಗ, ಮುದ್ದೇನಹಳ್ಳಿ, ಬೆಳಗಾವಿ, ಕಲಬುರಗಿ ಮತ್ತು ಮೈಸೂರು.

ಪ್ರತಿ ಮಾಹಿತಿಗಾಗಿ,

1. ಮಾನ್ಯ ಕುಲಪತಿಗಳು, ವಿ.ತಾ.ವಿ.,ಬೆಳಗಾವಿ ಇವರಿಗೆ ಕಾರ್ಯದರ್ಶಿಗಳ ಮುಖಾಂತರ.

## :ನಮೂನೆ:

ಕಾಲೇಜು ಹೆಸರು:______________________________

| ಕ್ರಮ ಸಂಖ್ಯೆ | ವಿದ್ಯಾರ್ಥಿಯ ಹೆಸರು | ಯು.ಎಸ್.ಎನ್ | ಕೋರ್ಸ್ | ಪದವಿ (ಯು.ಜಿ)/ ಸ್ನಾತಕೋತ್ತರ (ಪಿ.ಜಿ) | ಸೆಮಿಸ್ಟರ್/ವರ್ಷ | ಚರ್ಚಾ ಸ್ಪರ್ಧೆಯ ವಿಷಯ | ವಿದ್ಯಾರ್ಥಿಯ ಸಹಿ |
|---|---|---|---|---|---|---|---|
| | | | | | | | |
| | | | | | | | |